ತೊಡಗಿರುವ ಈ ಕಾಲದಲ್ಲಿ, ಗಾಂಧಿಯಷ್ಟು ಮುಗ್ಧವಾಗಿ ಸದಾ ಜನರ ಒಳಿತಿನ ಪ್ರಜ್ಞೆಯಲ್ಲಿ ನಂಬಿಕೆಯಿಟ್ಟು ವ್ಯವಹರಿಸಲಾಗದು. ಯಾಕೆಂದರೆ, ಇಡೀ ಜಗತ್ತಿನಲ್ಲಿ ಜಾಗತೀಕರಣದ ನಂತರದ ಸಮಾಜಗಳು ಇನ್ನೊಬ್ಬರನ್ನು ವಂಚಿಸಿ ಲಾಭ ಮಾಡಿಕೊಳ್ಳುವ, ಕೆಡುಕನ್ನುಂಟು ಮಾಡುವ ವಿಧಾನಗಳನ್ನು ವ್ಯವಸ್ಥಿತವಾಗಿ ಬೆಳೆಸುತ್ತಿವೆ. ಬ್ರಿಟಿಷ್ ಸರ್ಕಾರಕ್ಕಿದ್ದ ನೈತಿಕ ಭಯವೂ ಇಲ್ಲದ ಕ್ರೂರ ಸರ್ಕಾರಗಳು ನಮ್ಮನ್ನು ಆಳತೊಡಗಿವೆ. ಗಾಂಧೀ ಮಾರ್ಗದಲ್ಲಿರುವ ಸಂಘಟನೆಗಳು ಈ ಸೂಕ್ಷ್ಮಗಳನ್ನು ಕೂಡ ಆಳವಾಗಿ ಅರಿತು ಮುನ್ನಡೆಯಬೇಕಾಗುತ್ತದೆ.

ಇವತ್ತು ಇಂಡಿಯಾದಲ್ಲಿ ಕಾಣಬರುತ್ತಿರುವ ಅನೇಕ ಬಗೆಯ ಹಿಂಸೆಗಳಿಗೆ, ಜಾತಿ ಮೂಲದ ಹಿಂಸೆಗಳು, ದುರ್ಬಲರ ಮೇಲೆ ಪ್ರಬಲರು ನಡೆಸುವ ಹಿಂಸೆಗಳು, ವ್ಯಕ್ತಿ ವ್ಯಕ್ತಿಯ ಮೇಲೆ ನಡೆಸುವ ಹಿಂಸೆಗಳು ಇವೆಲ್ಲಕ್ಕೂ ಗಾಂಧೀಜಿ ಒಂದಲ್ಲ ಒಂದು ಹಂತದಲ್ಲಿ ಪರಿಹಾರ ಹುಡುಕಲೆತ್ನಿಸಿದ್ದಾರೆ. ಆ ಕಾಲದಲ್ಲಿ ಹಿಂದೂ–ಮುಸ್ಲಿಮರ ನಡುವೆ ನಡೆಯುತ್ತಿದ್ದ ಘರ್ಷಣೆಗಳಿಗೆ ಪರಿಹಾರ ಹುಡುಕುತ್ತಿದ್ದ ಗಾಂಧೀಜಿ ಒಮ್ಮೆ ಮನೋವಿಜ್ಞಾನಿಗಳ ಸಭೆಗೂ ಹೋಗಿ ಈ ಪ್ರಶ್ನೆಗೆ ಏನಾದರೂ ಉತ್ತರವಿದೆಯೇ ಎಂದು ಹುಡುಕಲೆತ್ನಿಸಿದರು. ಇವತ್ತು ಅನೇಕ ಬಗೆಯ ವೈಯಕ್ತಿಕ ಬಿಕ್ಕಟ್ಟುಗಳು ಹಾಗೂ ಸಾಮಾಜಿಕ ಬಿಕ್ಕಟ್ಟುಗಳಿಗೆ ಗಾಂಧೀ ಚಿಂತನೆಯಲ್ಲಿರುವ ಪರಿಹಾರಗಳನ್ನು ಅವರ ನಡೆ, ನುಡಿ, ಪತ್ರ, ಬರಹ, ಭಾಷಣಗಳಿಂದ ಹೆಕ್ಕಿಕೊಳ್ಳುವ ಅಗತ್ಯವಿದೆ. ಅವುಗಳಲ್ಲಿ ಅಸಂಬದ್ಧವಾದದ್ದನ್ನು ಕೈಬಿಟ್ಟು, ಈ ಕಾಲಕ್ಕೆ ಅಗತ್ಯವಾದದ್ದನ್ನು ಕೈಗೆತ್ತಿಕೊಂಡು ಈ ಕಾಲಕ್ಕೆ ತಕ್ಕಂತೆ ಮರುವಿವರಿಸಿಕೊಳ್ಳಬೇಕಾಗುತ್ತದೆ. ಗಾಂಧೀ ಚಿಂತನೆಯನ್ನು ಅದ್ಭುತವಾಗಿ ವ್ಯಾಖ್ಯಾನಿಸಿರುವ ಜಗತ್ತಿನ ನೂರಾರು ಚಿಂತಕ, ಚಿಂತಕಿಯರ ಮೂಲಕವೂ ಇವನ್ನು ಸದಾ ಗ್ರಹಿಸಬೇಕಾಗುತ್ತದೆ.

ಗಾಂಧಿವಾದವೆನ್ನುವುದು 'ನಾನು ಎಂದೂ ತಪ್ಪು ಮಾಡಿಲ್ಲ ಅಥವಾ ತಪ್ಪು ಮಾಡುವುದೂ ಇಲ್ಲ' ಎಂದು ಬೊಗಳೆ ಬಿಡುವ ದುರಹಂಕಾರದ ಸಾರ್ವಜನಿಕ ಭಂಗಿಯಲ್ಲ; ನಿತ್ಯ ತಪ್ಪು ಮಾಡಲೆಂದೇ ಹುಟ್ಟಿರುವ ಮನುಷ್ಯರು ಹಾಗೂ ಅವರು ರೂಪಿಸಿಕೊಂಡಿರುವ ಸಂಸ್ಥೆಗಳು ತಾವು ತಪ್ಪು ಮಾಡಿದಾಗಲೆಲ್ಲ ತಮ್ಮನ್ನು ತಾವು ಪ್ರಾಮಾಣಿಕವಾಗಿ ಪರೀಕ್ಷೆ ಮಾಡಿಕೊಂಡು ಅದನ್ನು ಮೀರುವ, ಸರಿಪಡಿಸಿಕೊಳ್ಳುವ ವಿನಯದ ಮಾರ್ಗ. ನಮ್ಮೆಲ್ಲ ಕ್ರಿಯೆ, ಪ್ರತಿಕ್ರಿಯೆಗಳನ್ನು ನಿಯಂತ್ರಿಸುವ ಸುಪ್ತ ಅಹಂಕಾರವನ್ನು ಬಿಟ್ಟು ಯೋಚಿಸುವುದು ಕೂಡ ಗಾಂಧೀ ಮಾರ್ಗದ ಒಂದು ಭಾಗವೇ. ಹಾಗೆಯೇ ಯಾವುದೇ ಮಹತ್ತರ ವಿದ್ಯಮಾನಗಳಿಗೆ ಆಳದ ನೈತಿಕ ನೆಲೆಯಿಂದ ಪ್ರತಿಕ್ರಿಯಿಸಬೇಕೆಂದು ಗಾಂಧೀ ಚಿಂತನೆ ಬಯಸುತ್ತದೆ. ಇವತ್ತು ಟಿಬೆಟಿಯನ್ನರ ಮೇಲೆ ನಡೆಯುವ ಚೀನಾದ ಆಕ್ರಮಣಗಳ ಬಗ್ಗೆ ಇಂಡಿಯಾದ ಮಾವೋವಾದಿಗಳು ದನಿಯೆತ್ತದಿದ್ದರೆ, ಅವರು ಇಂಡಿಯಾದ ಒಳಗೆ ನಡೆಯುವ ಇನ್ನಿತರ ಆಕ್ರಮಣಗಳ ಬಗ್ಗೆ ಅಳುಕಿನಿಂದ ಮಾತಾಡಬೇಕಾಗುತ್ತದೆ. ಆದರೆ ಗಾಂಧೀಜಿ ಚೀನಾದ ಹಲ್ಲೆಗೊಳಗಾದ ಟಿಬೆಟಿಯನ್ನರ ಬಗೆಗೂ, ಇವತ್ತು ಇಂಡಿಯಾದ ಸರ್ಕಾರದಿಂದ ಹಲ್ಲೆಗೊಳಗಾಗಿರುವ 'ಮಾವೋವಾದಿಗಳು' ಎನ್ನಲಾದ ಬುದ್ಧಿಜೀವಿಗಳ ಬಗೆಗೂ ಒಂದೇ ಬಗೆಯ ಅನುಕಂಪದಿಂದ ಮಾತಾಡಿ ಕ್ರಿಯೆಗಿಳಿಯುತ್ತಿದ್ದರು. ಗಾಂಧೀಜಿ ಈ ಎರಡೂ ಪ್ರತಿಭಟನೆಗಳ ಮುಂಚೂಣಿಯಲ್ಲಿರುತ್ತಿದ್ದರು. ಈ ಹಿನ್ನೆಲೆಯಲ್ಲಿ ನೋಡಿದಾಗ ಗಾಂಧೀವಾದಿ – ಬುದ್ಧಿಸ್ಟ್ ಆಂಗ್ ಸಾನ್ ಸೂಕಿ ಈಚೆಗೆ ರೊಹಿಂಗ್ಯಾ ಮುಸ್ಲಿಂ ನಿರಾಶ್ರಿತರ ವಿರುದ್ಧ ತಳೆದಿರುವ ಅಮಾನವೀಯ ನಿಲುವು ಅವರ ಮಾನವೀಯತೆಯನ್ನೇ ಸಂಶಯಿಸುವಂತೆ ಮಾಡಿದೆ.